

ಎಲಿಫೆಂಟ್ ಲೇಕ್



ಕ್ಯುಂಗ್ ನ್ಯುಸಿಯಾ ಜಲಪಾತ

ಇಲ್ಲಿಗೆ ಬರುವ ಯಾತ್ರಾರ್ಥಿಗಳ ಸಂಖ್ಯೆಯೂ ಏರಿಕೆಯಾಗಿದೆಯಂತೆ.

ಇಲ್ಲಿನ ಸೈನಿಕರು ಬಾಬಾರನ್ನು ನಂಬುತ್ತಾರೆ. ಬಾಬಾ ಬಗ್ಗೆ ಅನೇಕ ಕಥೆಗಳಿವೆ. ಬಾಬಾ ರಾತ್ರಿ ಇಲ್ಲಿಗೆ ಬರುತ್ತಾರಂತೆ. ಬಂದು ಹೋದ ಮರುದಿವಸ ಅವರ ಬೂಟಿನ ಅಚ್ಚು ಗುರುತು ಅವರು ನಡೆದಾಡಿದ ಜಾಗದಲ್ಲಿ ಇರುತ್ತದೆಯಂತೆ. ಅಷ್ಟೇ ಅಲ್ಲದೇ ಅವರ ಹಾಸಿಗೆಯಲ್ಲಿ ಹೊಸತೊಂದು ಬಟ್ಟೆ ಇರುತ್ತದೆಯಂತೆ. ಕರ್ನಾಟಕದ ಯೋಧರೊಬ್ಬರನ್ನು ಈ ಬಗ್ಗೆ ವಿಚಾರಿಸಿದೆವು. ಅವರೂ ಅದನ್ನೇ ಹೇಳಿದರು. ಸಮೀಪದಲ್ಲಿ ಬಾಬಾ ಅವರ ಬಂಕರ್ ಇದೆ. ಅಲ್ಲಿ ಬಾಬಾ ಉಪಯೋಗಿಸಿದ ವಸ್ತುಗಳನ್ನು ಇರಿಸಿದ್ದಾರೆ. ಂಕರ್‌ನಲ್ಲಿ ಮಲಗುವ ಕೋಣೆ, ಹಾಸಿಗೆ ಎಲ್ಲವೂ ಇದೆ. ಸಮೀಪದಲ್ಲಿ ಎರಡು ಅಡಿ ಆಳದ ಸಣ್ಣ ನೀರಿನಹೊಂಡ ಇದೆ. ಹೊಂಡಕ್ಕೆ ನಾಣ್ಯಗಳನ್ನು ಹಾಕಿದರೆ ಕೆಲವರಿಗೆ ತುಂಬಾ ನಾಣ್ಯಗಳು ಸಿಗುತ್ತವಂತೆ. ಇನ್ನು ಕೆಲವರಿಗೆ ಏನೂ ಸಿಗುವುದಿಲ್ಲವಂತೆ. ಮಂದಿರದಲ್ಲಿ ಬಾಬಾ ವಿಗ್ರಹದ ಪೂಜೆ ನಡೆಯುತ್ತದೆ. ಅಲ್ಲಿ ಸೈನಿಕರ ಕ್ಯಾಂಟೀನ್ ಇದೆ. ಉಚಿತವಾಗಿ ಪ್ರಸಾದದ ರೂಪದಲ್ಲಿ ಕಾಫಿಯನ್ನು ಎಷ್ಟು ಬೇಕಾದರೂ ಕುಡಿಯಬಹುದು.

ಬಾಬಾ ಮಂದಿರದ ಇನ್ನೊಂದು ವಿಶೇಷವೆಂದರೆ ಇಲ್ಲಿ ಹರಕೆಯ ರೂಪದಲ್ಲಿ ದೇವರಿಗೆ ‘ಮಿನರಲ್ ವಾಟರ್’ ಅರ್ಪಿಸುತ್ತಾರೆ! ಆ ಮಿನರಲ್ ವಾಟರ್‌ಅನ್ನು 21 ದಿನಗಳವರೆಗೆ ಮನೆಯ ದೇವರ ಕೋಣೆಯಲ್ಲಿ ಇಟ್ಟು, ಸ್ವಲ್ಪ ಸ್ವಲ್ಪವೇ ಸೇವಿಸುತ್ತಾ ಇದ್ದರೆ ಅವರ ಮನೋಕಾಮನೆಗಳು ಈಡೇರುತ್ತವೆ ಎನ್ನುವ ನಂಬಿಕೆಯೂ ಇದೆ. ಈ ಪ್ರದೇಶದಲ್ಲಿ ಮಿಲಿಟರಿ ವಾಹನಗಳು ಜಾಸ್ತಿ ಓಡಾಡುತ್ತಿದ್ದು ಬಹುತೇಕ ಸೈನಿಕರು ಬಾಬಾ ದರ್ಶನ ಪಡೆದೇ ಮುಂದೆ ಸಾಗುತ್ತಾರೆ.

ಬಾಬಾ ಮಂದಿರದ ಹೊರಗಡೆ ಒಂದು ಗೋಡೆಯ ಮೇಲೆ ಸೈನ್ಯಕ್ಕೆ ಸಂಬಂಧಪಟ್ಟ ಬೇರೆ ಬೇರೆ ರೆಜಿಮೆಂಟಿನ ಹಲವಾರು ನಾಮಫಲಕಗಳನ್ನು (ಗ್ರಾನೈಟ್ ನಾಮಫಲಕ) ಇಟ್ಟಿದ್ದಾರೆ. ಅದರಲ್ಲಿ ಬಾಬಾನ ಆರ್ಶೀವಾದ ನಮ್ಮ ಮೇಲೆ ಇರಲಿ ಎನ್ನುವ ಉಲ್ಲೇಖಗಳಿವೆ. ಇಲ್ಲಿಂದ 40 ನಿಮಿಷ ಪ್ರಯಾಣಿಸಿದರೆ ನ್ಯೂ ಬಾಬಾ ಮಂದಿರ್ ಕಾಣಿಸುತ್ತದೆ. ಇದು ಹರಭಜನ್ ಸಿಂಗ್ ಬಾಬಾರ ಭಕ್ತರೊಬ್ಬರು ನಿರ್ಮಿಸಿದ ಮಂದಿರ.

## ಚಾಂಗು ಲೇಕ್

ಚಾಂಗು ಸರೋವರ ಪೂರ್ವ ಸಿಕ್ಕಿಂನ ಪ್ರಮುಖ ಪ್ರೇಕ್ಷಣೀಯ ಸ್ಥಳ. ರಾಜಧಾನಿ ಗ್ಯಾಂಗ್ಟಕ್‌ನಿಂದ 40 ಕಿ.ಮೀ. ದೂರದಲ್ಲಿದೆ. ಚಳಿಗಾಲದಲ್ಲಿ ಈ ಸರೋವರ ಮತ್ತು ಪಕ್ಕದ ಬೆಟ್ಟಗಳು ಹಿಮದಿಂದ ಆವೃತ್ತವಾಗಿರುತ್ತವೆ. 836 ಅಡಿ ಉದ್ದ ಮತ್ತು 427 ಅಡಿ ಅಗಲವಿರುವ ಈ ಸರೋವರ, 15 ಅಡಿಗಳಿಂದ 49 ಅಡಿಗಳವರೆಗೆ ಆಳವಿದೆ. ಪಕ್ಕದಲ್ಲೇ ಒಂದು ಶಿವನ ಮಂದಿರವಿದೆ. ಸುತ್ತ ಬೆಟ್ಟಗಳಿರುವುದರಿಂದ ಸರೋವರ ತುಂಬಾ ರಮಣೀಯ.

ಪ್ರವಾಸಿಗರ ಆಕರ್ಷಣೆಗೆ ಇಲ್ಲಿ ಯಾಕ್ ಸವಾರಿಯೂ ಇದೆ. ಸ್ಥಳೀಯ ಉಡುಪುಗಳನ್ನು ಧರಿಸಿ ಯಾಕ್ ಮೇಲೆ ಸವಾರಿ ಮಾಡಿ ಫೋಟೋ ತೆಗೆಸಿಕೊಳ್ಳುವವರಿದ್ದಾರೆ. ಯಾಕ್ ಅನ್ನೂ ವಿವಿಧ ಬಣ್ಣಗಳಿಂದ ಶೃಂಗರಿಸುತ್ತಾರೆ.

ಚಾಂಗು ಲೇಕ್‌ನಿಂದ ಗ್ಯಾಂಗ್ಟಕ್‌ಗೆ ಹೋಗುವ ರಸ್ತೆಯನ್ನು ಎತ್ತರವಾದ ಪರ್ವತಗಳ ಕೊರೆದು ನಿರ್ಮಿಸಿದ್ದಾರೆ. ಒಂದು ಬದಿಗೆ ಆಳವಾದ ಕಣಿವೆ; ಇನ್ನೊಂದೆಡೆ ರಸ್ತೆಯುದ್ದಕ್ಕೂ ಅಲ್ಲಲ್ಲಿ ಕುಸಿದ ಮಣ್ಣಿನ ರಾಶಿ ಭಯ ಹುಟ್ಟಿಸುವಂತಿವೆ.

ಇಲ್ಲಿಂದ ಗ್ಯಾಂಗ್ಟಕ್‌ಗೆ ಒಂದೂವರೆ ಗಂಟೆಯ ಪ್ರಯಾಣ. ಸಿಕ್ಕಿಂ ರಾಜ್ಯದ ನಂಬರ್ ಪ್ಲೇಟ್ ಹೊಂದಿದ್ದರೂ ಸಂಜೆ 7 ಗಂಟೆಯವರೆಗೆ ನಗರದೊಳಗೆ ಪ್ರವೇಶಿಸುವಂತಿಲ್ಲ. ಗ್ಯಾಂಗ್ಟಕ್‌ನಲ್ಲಿ ನಿಧಾನವಾಗಿ ಮತ್ತು ಹಾರ್ನ್ ಹಾಕದೆ ವಾಹನಗಳನ್ನು ಚಲಾಯಿಸುತ್ತಾರೆ. ನಗರದ ತುಂಬ ಎಲ್ಲಿ ನೋಡಿದರಲ್ಲಿ ಬಾರ್‌ಗಳಿವೆ. ಮದ್ಯಪ್ರಿಯರಿಗೆ ನಿತ್ಯ ಹಬ್ಬ. ಹಿತವಾದ ಹವೆ, ಪ್ರಕೃತಿಯ ಅಪರೂಪದ ನೋಟ, ರಮಣೀಯ ಗುಡ್ಡಬೆಟ್ಟ-ಗಳಿಂದಾಗಿ ಈ ರಾಜ್ಯ ತುಂಬ ಸೊಗಸಾಗಿದೆ.